# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 683 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18.08.2025 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕಳೆದ 2 ವರ್ಷದಲ್ಲಿ ಒಟ್ಟು ಎಷ್ಟು ಬಿಪಿಎಲ್ ಕಾರ್ಡ್ ಗಳನ್ನು ರದ್ದುಪಡಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಕಳೆದ 2 ವರ್ಷದಲ್ಲಿ 10,810 ಅನರ್ಹ ಪಡಿತರ ಚೀಟಿಗಳನ್ನು ರದ್ದು/ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ. |
| ಆ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 2 ವರ್ಷಗಳಲ್ಲಿ ಎಷ್ಟು ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ; ಎಷ್ಟು ಹೊಸ ಬಿಪಿಎಲ್ ಕಾರ್ಡ್‌ಗಳನ್ನು ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) ಯಾವೆಲ್ಲಾ ಕಾರಣಗಳಿಗಾಗಿ ಬಿಪಿಎಲ್ ಕಾರ್ಡ್‌ನ್ನು ರದ್ದುಪಡಿಸಲಾಗಿದೆ; (ವಿವರ ನೀಡುವುದು); | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ವಿತರಿಸಲಾದ ಆದ್ಯತಾ ಪಡಿತರ ಚೀಟಿಗಳು ಹಾಗೂ ರದ್ದುಪಡಿಸಲಾದ ಪಡಿತರ ಚೀಟಿಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ. |

**ದಕ್ಷಿಣ ಕನ್ನಡ ಜಿಲ್ಲೆ**

| ತಾಲ್ಲೂಕು | ಕಳೆದ 2 ವರ್ಷಗಳಲ್ಲಿ ವಿತರಿಸಲಾದ ಹೊಸ ಪಡಿತರ ಚೀಟಿಗಳು | ರದ್ದುಪಡಿಸಲಾದ ಪಡಿತರ ಚೀಟಿಗಳು |
|---|---|---|
| ಬೆಳ್ತಂಗಡಿ | 879 | 75 |
| ಬಂಟ್ವಾಳ | 1003 | 151 |
| ಮಂಗಳೂರು | 1545 | 446 |
| ಪುತ್ತೂರು | 644 | 112 |
| ಸೂಳ್ಯ | 247 | 23 |
| ಮುಡಬಿದ್ರಿ | 432 | 19 |
| ಕಡಬ | 314 | 84 |
| ಮುಲ್ಕಿ | 259 | 125 |
| ಉಲ್ಲಾಳ | 715 | 46 |
| ಒಟ್ಟು | 6038 | 1081 |

**ಉಡುಪಿ ಜಿಲ್ಲೆ**

| ತಾಲ್ಲೂಕು | ಕಳೆದ 2 ವರ್ಷಗಳಲ್ಲಿ ವಿತರಿಸಲಾದ ಹೊಸ ಪಡಿತರ ಚೀಟಿಗಳು | ರದ್ದುಪಡಿಸಲಾದ ಪಡಿತರ ಚೀಟಿಗಳು |
|---|---|---|
| ಕಾರ್ಕಳ | 505 | 326 |
| ಕುಂದಾಪುರ | 560 | 502 |

<table>
<tr><td></td><td></td><td>
<table>
<tr><td>ಉಡುಪಿ</td><td>866</td><td>171</td></tr>
<tr><td>ಕಾಪು</td><td>649</td><td>331</td></tr>
<tr><td>ಬ್ರಹ್ಮಾವರ</td><td>668</td><td>172</td></tr>
<tr><td>ಬೈಂದೂರು</td><td>863</td><td>230</td></tr>
<tr><td>ಹೆಬ್ರಿ</td><td>161</td><td>61</td></tr>
<tr><td>ಒಟ್ಟು</td><td>4272</td><td>1793</td></tr>
</table>
<br>ಆದ್ಯತಾ ಪಡಿತರ ಚೀಟಿಗಳನ್ನು ಈ ಕೆಳಕಂಡ ಕಾರಣಗಳಿಂದ ರದ್ದುಪಡಿಸಲಾಗಿರುತ್ತದೆ.<br>• ಏಕ ವ್ಯಕ್ತಿ ಮೃತಪಟ್ಟಿರುವ ಪಡಿತರ ಚೀಟಿಗಳು.<br>• ಪಡಿತರ ಚೀಟಿ ಆದ್ಯರ್ಪಣೆ ಮಾಡಿ ಬೇರೆಡೆಗೆ ವಾಸ್ತವ್ಯ ಬದಲಾವಣೆ ಮಾಡಿರುವವರು.<br>• ಬೇರೆ ಪಡಿತರ ಚೀಟಿಗೆ ಹೆಸರು ಸೇರ್ಪಡೆ ಮಾಡಲು ರದ್ದುಪಡಿಸಲಾದವು.</td></tr>
<tr><td>ಇ</td><td>ರಾಜ್ಯದಲ್ಲಿ ಪ್ರಸ್ತುತ ಅರ್ಹರಿಗೆ ಹೊಸದಾಗಿ ಬಿ.ಪಿ.ಎಲ್ ಕಾರ್ಡ್‌ನ್ನು ನೀಡಲಾಗುತ್ತಿದೆಯೇ; ಕಳೆದ 2 ವರ್ಷದಲ್ಲಿ ಬಿಪಿಎಲ್ ಕಾರ್ಡ್‌ಗೆ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; ಎಷ್ಟು ಅರ್ಜಿಗಳನ್ನು ಇತ್ಯರ್ಥ ಪಡಿಸಲಾಗಿದೆ; ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ;</td><td>ಸರ್ಕಾರದ ಆದೇಶ ಸಂಖ್ಯೆ: ಆನಾಸ 211 ಡಿಆರ್‌ಎ 2021 ದಿನಾಂಕ: 29.09.2023 ರನ್ವಯ 1,99,410 ಹೊಸ ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸಲಾಗಿರುತ್ತದೆ.<br>ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013 ರಡಿ ರಾಜ್ಯದಲ್ಲಿ 4,01,93,000 ಫಲಾನುಭವಿಗಳಿಗೆ ಪಡಿತರ ವಿತರಿಸಲು ಗುರಿಯನ್ನು ನಿಗಧಿಪಡಿಸಲಾಗಿರುತ್ತದೆ. ಆದರೆ ರಾಜ್ಯದಲ್ಲಿ 4,53,89,504 ಫಲಾನುಭವಿಗಳಿಗೆ ಆಹಾರ ಧಾನ್ಯವನ್ನು ವಿತರಿಸಲಾಗಿರುತ್ತದೆ.<br>ಆದ್ದರಿಂದ, ಈಗಾಗಲೇ ಆದ್ಯತಾ ಪಡಿತರ ಚೀಟಿ (PHH) ಪಡಿತರ ಚೀಟಿ ಪಡೆದಿರುವವರಲ್ಲಿ ಅನರ್ಹರನ್ನು ಪತ್ತೆ ಹಚ್ಚುವ ಕಾರ್ಯವು ನಿರಂತರವಾಗಿ ನಡೆಯುತ್ತಿದ್ದು, ಅನರ್ಹ ಪಡಿತರ ಚೀಟಿಯನ್ನು ರದ್ದುಪಡಿಸಿದಲ್ಲಿ ಅಷ್ಟೇ ಪ್ರಮಾಣದ ಹೊಸ ಪಡಿತರ ಚೀಟಿ ನೀಡಲು ಅವಕಾಶವಿರುತ್ತದೆ.<br>ಆದಾಗ್ಯೂ, ತುರ್ತು ವೈದ್ಯಕೀಯ ಪರಿಸ್ಥಿತಿ ಹಿನ್ನೆಲೆ ಇರುವ ಅರ್ಹರಿಗೆ ಇ-ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಹಾಗೂ PVTG's ರಡಿ ಬರುವ ಬುಡಕಟ್ಟು ಸಮುದಾಯದವರಿಗೆ ಪಡಿತರ ಚೀಟಿಯನ್ನು ಕಾಲಕಾಲಕ್ಕೆ ವಿತರಿಸಲು ಕ್ರಮವಹಿಸಲಾಗುತ್ತಿದೆ.<br>ದಿನಾಂಕ: 29.07.2025 ರ ಅಂತ್ಯಕ್ಕೆ ಒಟ್ಟು 3,27,309 ಆದ್ಯತಾ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಲಾಗಿರುತ್ತದೆ.</td></tr>
</table>

| | | |
|---|---|---|
| ಈ | ಆದಾಯ ತೆರಿಗೆ ಪಾವತಿದಾರರು ಹಾಗೂ ಇನ್ನೂ ಕೆಲ ಅನರ್ಹರು ಕೂಡ ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಅನರ್ಹರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲು ಏನೇನು ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು) | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013 ರಡಿ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ಕಾರ್ಯ ನಿರಂತರವಾಗಿ ನಡೆಯುತ್ತಿರುತ್ತದೆ. 2024-25ನೇ ಸಾಲಿನಿಂದ ಇಲ್ಲಿಯವರೆಗೆ 8,00,793 ಅನರ್ಹ ಫಲಾನುಭವಿಗಳನ್ನು ಹಾಗೂ 7,71,911 ಅನರ್ಹ ಪಡಿತರ ಚೀಟಿಗಳನ್ನು ಪತ್ತೆಹಚ್ಚಿದ್ದು, ಸದರಿ ಪಡಿತರ ಚೀಟಿಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ ಹಾಗೂ 10,810 ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿರುತ್ತದೆ. |

ಇ-ಆನಾಸ 224 ಡಿಆರ್ಎ 2025

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

| ಅನುಬಂಧ-01 | | |
|---|---|---|
| ಶ್ರೀ. ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ವಿಧಾನ ಪರಿಷತ್ತಿನ ಸದಸ್ಯರು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 683 | | |
| Sl. | District Name | Total RCs |
| 1 | BAGALKOTE | 1700 |
| 2 | BALLARI | 0 |
| 3 | BANGALORE EAST | 25 |
| 4 | BANGALORE NORTH | 24 |
| 5 | BANGALORE SOUTH | 25 |
| 6 | BANGALORE WEST | 0 |
| 7 | BELAGAVI | 787 |
| 8 | BENGALURU | 167 |
| 9 | BENGALURU RURAL | 753 |
| 10 | BIDAR | 149 |
| 11 | CHAMARAJANAGARA | 6 |
| 12 | CHIKKABALLAPURA | 32 |
| 13 | CHIKKAMAGALURU | 694 |
| 14 | CHITRADURGA | 1241 |
| 15 | DAKSHINA KANNADA | 407 |
| 16 | DAVANAGERE | 309 |
| 17 | DHARWAR | 13 |
| 18 | GADAG | 213 |
| 19 | HASSAN | 5 |
| 20 | HAVERI | 0 |
| 21 | KALABURAGI | 48 |
| 22 | KODAGU | 27 |
| 23 | KOLAR | 73 |
| 24 | KOPPAL | 144 |
| 25 | MANDYA | 123 |
| 26 | MYSURU | 258 |
| 27 | RAICHUR | 52 |
| 28 | RAMANAGARA | 122 |
| 29 | SHIVAMOGGA | 143 |
| 30 | TUMAKURU | 1938 |
| 31 | UDUPI | 800 |
| 32 | UTTARA KANNADA | 0 |
| 33 | VIJAYANAGARA | 0 |
| 34 | VIJAYAPURA | 278 |
| 35 | YADGIR | 254 |
| | **TOTAL** | **10810** |

ಜಂಟಿ ನಿರ್ದೇಶಕರು (ಐಟಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ